ಹೊರಡಬೇಕು? ಅಂದಾಗ ನನಗೆ ನಮ್ಮ ಪರಂಪರೆಯ ಯೋಗಿಕ ಮಾರ್ಗಗಳು ಕಾಣಿಸಿದವು. ಅಲ್ಲಿ ಪ್ರತಿಯೊಬ್ಬರೆದುರೂ ಸಾಧನಾ ಮಾರ್ಗವಿದೆ. ಇಲ್ಲೂ ಕೆಲ ಢೋಂಗಿಗಳಿದ್ದಾರೆ. ನಾನು ಅವರನ್ನ ಕುರಿತು ಹೇಳ್ತಿಲ್ಲ. ನೋಡಿ ಸತ್ಯವನ್ನು ನಂಬುವುದಲ್ಲ, ಭೌತಿಕವಾಗಿ ತಿಳಿದುಕೊಳ್ಳುವುದಲ್ಲ, ಅದನ್ನು ಅನುಭಾವಿಕವಾಗಿ ಸಾಕ್ಷಾತ್ಕರಿಸಿಕೊಳ್ಳುವುದು. ಬುದ್ಧ ಕೂಡ ಒಳಗಿನ ಅರಿವನ್ನು ಕುರಿತು ಹೇಳಿದ. ಅದನ್ನು ಸಾಧನಾ ಪಥವಾಗಿಸಿದ. ಕಾವ್ಯದಲ್ಲಿ ಸಿಗುವ ಚಿತ್ತವಿಶ್ರಾಂತಿ ಸಾಪೇಕ್ಷವಾದದ್ದು. ಆದರೆ, ಯಾರಲ್ಲಿ ಒಂದು ಆಂತರಿಕ ಸಾಕ್ಷಾತ್ಕಾರವಾಗಿರ್ತದೆಯೊ ಆತ ಅಥವಾ ಆಕೆ ಪೂರ್ಣ ಒಂದು ಸ್ವರೂಪವನ್ನೇ ಬದಲಾಯಿಸಿಬಿಡ್ತಾರೆ. ನಾನು ಕೆಲ ಗುರುಗಳನ್ನ ಹುಡುಕ್ತಾ ಹೋದೆ; ಕೆಲವರಾದರೂ ನೈಜ ಗುರುಗಳು ನನಗೆ ಸಿಕ್ರು. ಇದನ್ನೆಲ್ಲ ನಾನು ನನ್ನ 'ಬತ್ತೀಸ ರಾಗ'ದಲ್ಲಿ ಹೇಳಿರುವೆ. ಮುಂದೆ ನನ್ನ ಸ್ವಪ್ನಾವಸ್ಥೆಯಲ್ಲಿ, ಧ್ಯಾನಾವಸ್ಥೆಯಲ್ಲಿ ಅನೇಕರು ಬಂದು ಮಾರ್ಗದರ್ಶನ ಮಾಡಿದ್ರು, ಅಪಾಯಗಳಿಂದ ಪಾರು ಮಾಡಿದ್ರು. ಇದು ತರ್ಕಕ್ಕೆ ಹೊರತಾದದ್ದು. ಅಲ್ಲೊಂದು ಬೇರೆ ತರ್ಕವಿದೆ. ಅದನ್ನು ಅರ್ಥಮಾಡ್ಕೊಳ್ಳೋಕೆ ಬೇರೆ ಮನಃಸ್ಥಿತಿ ಬೇಕು. ನನಗೆ ಗೊತ್ತು ಇದು ಅನೇಕರಿಗೆ ಇಷ್ಟವಾಗೊಲ್ಲ. ಬೇರೆಯವರ ಇಷ್ಟಾನಿಷ್ಟ ತಗೊಂಡು ನನಗೇನಾಗಬೇಕಿದೆ. ನಾನು ಅನೇಕ ಧ್ಯಾನದ ಬಗೆಗಳನ್ನು ಪ್ರ್ಯಾಕ್ಟೀಸ್ ಮಾಡ್ತೇನೆ. ಅನೇಕ ಸೂಫೀ ಗುರುಗಳು, ಕೋಡಿ ಮಠದ ಶಿವಲಿಂಗ ಸ್ವಾಮಿಗಳು ಕೆಲವು ರಹಸ್ಯ ಮಂತ್ರಗಳನ್ನ ಕಲಿಸಿದ್ದಾರೆ. ಅದನ್ನೆಲ್ಲ ನಾನು ಧ್ಯಾನದಲ್ಲಿ ಅಳವಡಿಸಿಕೊಂಡಿರುವೆ. ಮೈಸೂರಿನ ರಾ. ಸತ್ಯನಾರಾಯಣ ಅವರಿಂದ ಶ್ರೀವಿದ್ಯಾ ದೀಕ್ಷೆ ಪಡೆದುಕೊಂಡು ಶಾಕ್ತ ಸಾಧನೆ ಮಾಡ್ತಿರುವೆ. ಇದೆಲ್ಲ ನನ್ನನ್ನು ಕಾಪಾಡಿದೆ.

◆ **ನೀವು ನಿಮ್ಮ ಕಾವ್ಯದಲ್ಲಿ ಅನೇಕ ಶೈಲಿಗಳನ್ನು ಕಾಣಿಸಿದ್ದೀರಿ. ಮುಕ್ತ ಛಂದಸ್ಸು, ಖಂಡಕಾವ್ಯ, ಗಜಲ್, ತತ್ತ್ವಪದ, ವಚನ, ಹಾಯ್ಕು ಇತ್ಯಾದಿ. ನನ್ನ ಪ್ರಶ್ನೆ ಏನಂದ್ರೆ ಕಾವ್ಯದ ಆಕಾರ ಬದಲಾದ ಹಾಗೆ ಅದರ ದೃಷ್ಟಿಯಲ್ಲಿ, ಭಾವದಲ್ಲಿ, ಕಲ್ಪನೆ, ನುಡಿಗಟ್ಟು, ಭಾಷೆಯಲ್ಲಿ ಏನೆಲ್ಲ ಬದಲಾವಣೆಗಳಾಗ್ತವೆ? ಅಥವಾ ಇದೆಲ್ಲ ಅಂಥ ಬದಲಾವಣೆಗೆ ಕಾರಣವಾಗೋದಿಲ್ಲವೆ?**

ಕಾವ್ಯರಚನೆಯ ಆರಂಭದ ದಿನಗಳಲ್ಲಿ ಮೈಸೂರಿನೊಳಗೆ ವಾಮಪಂಥೀಯ ಬರಹಗಾರರ ಕಾರ್ಯಾಗಾರವೊಂದು ನಡೆಯಿತು. ಅದರಲ್ಲಿ ನಾನು ಭಾಗವಹಿಸಿದ್ದೆ. ಅಲ್ಲಿ ಸಯೀದ್ ಜಾಫ್ರಿ ಬಂದಿದ್ರು. ಅವರು ಹೇಳಿದ್ದೇನಂದ್ರೆ, ಕಾವ್ಯದಲ್ಲಿ ಶೈಲಿ ಎನ್ನುವುದು ಕವಿಯ ಸ್ವಭಾವ. ಅದರ ಅಂತರಾಳವನ್ನು ಕವಿ ಕಂಡುಕೊಳ್ತಾನೆ. ಅದು ಅವನಿಗೆ ಪದಪುಂಜವಾಗಿ, ಕಲ್ಪನೆಯಾಗಿ, ಭಾವವಾಗಿ, ರೂಪಕವಾಗಿ ಕಾಣಿಸಿಕೊಳ್ಳೋಕೆ ಶುರುವಾಗುತ್ತೆ. ನಮ್ಮನ್ನು ನಾವು ಇಂಪೋಸ್ ಮಾಡಿಕೊಳ್ಳೋಕೆ ಹೋಗಬಾರದು. ಅದನ್ನು ಸುಮ್ಮನೆ ಅನುಸರಿಸಬೇಕು. ರಾಗತಾನಗಳು ನಮಗೆ ಗೊತ್ತಾಗದಂತೆ ಉಸಿರನ್ನು ಹಿಗ್ಗಿಸ್ತಾ ಕುಗ್ಗಿಸ್ತಾ ಇರ್ತವೆ. ಕೊಳಲನ್ನು ಉಸಿರು ನುಡಿಸುವ ಹಾಗೆ, ಕವಿಯ ಉಸಿರು ಕಾವ್ಯದ ಆಕಾರವನ್ನು ರೂಪಿಸ್ತದೆ. ಅದನ್ನು ಮುದ್ದಾಮಾಗಿ ಮಾಡ್ಲಿಕ್ಕೆ ಹೋದಾಗ ಎಷ್ಟೋ ಸಲ ಬಿದ್ದುಹೋಗಬಹುದು. ಕಾವ್ಯ ಬರೆಯೋ ಸಂದರ್ಭದಲ್ಲಿ ಬೇರೆ ಸಾಹಿತ್ಯ ಪ್ರಕಾರಗಳನ್ನೂ ನೋಡಬೇಕು. ಇದೆಲ್ಲ ನಮಗೆ ಗೊತ್ತಾಗದಂತೆ ನಾವು ಕವಿತೆ ಬರೆಯೋ ಸಂದರ್ಭದಲ್ಲಿ ನೆರವಾಗ್ತದೆ. ಹಾಗಂತ ಕಾವ್ಯದ ಶಿಲ್ಪಕ್ಕೆ ತರ್ಕಬದ್ಧವಾಗಿ ಗಮನ ಕೊಡಬಾರದು. ಅದು ವಿಮರ್ಶಕನ ಕೆಲಸ. ನಿನ್ನ ಕೆಲಸ ನಿನ್ನ ಉಸಿರು ನಡೆಸಿದಂತೆ ಸಾಗುವುದು. ನಾನು ಬಳಸಿದ ಬಗೆಬಗೆಯ ಶೈಲಿಗಳೆಲ್ಲ ಉದ್ದೇಶಪೂರ್ವಕವಲ್ಲ. ಅವು ತಮಗೆ ತಾವೇ ಆ ದಾರಿ ಕಂಡುಕೊಂಡಿವೆ. ಯಾವುದನ್ನೊ ನನಗೆ ವಚನದಲ್ಲಿ ಬರೀಬೇಕು ಅನ್ನುತ್ತೆ, ಇನ್ನಾವುದನ್ನೊ ಗಜಲಿನಲ್ಲಿ, ಹಾಗೆಯೇ ಮತ್ತಾವುದನ್ನೊ ದೀರ್ಘಕಾವ್ಯವಾಗಿ. ಇದೆಲ್ಲ ಲೆಕ್ಕಾಚಾರ ಹಾಕಿ ಮಾಡಿದ್ದಲ್ಲ. ಒಂದು ಕವಿತೆ ಬರ್ದಾಗ ಇನ್ನಾವುದೊ